ಶ್ರೀ ಬಿ. ಸ್ವಾಮಿರಾವ್.—ಸರ್ಕಾರಿ ಕಾಲೇಜಿಗೆ ಏಕೆ ಕೊಡಲಿಲ್ಲವೆಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು ಆರೋಗ್ಯ ಮಂತ್ರಿಯಾಗಿ ಬಂದ ಮೇಲೆ ಬೆಂಗಳೂರಿನ ಕಾಲೇಜಿಗೆ ಮತ್ತು ಮೈಸೂರಿನ ಕಾಲೇಜಿಗೆ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದೇನೆ. ಈ ವರ್ಷ ನಾವು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರನ್ನು ಕೇಳಿದ್ದೇವೆ. ಹಿಂದೆ ಸ್ವಲ್ಪ ಹೆಚ್ಚು ಸೀಟುಗಳನ್ನು ಕೊಡಲಾಗಿತ್ತು. ಇನ್ನೂ ಹೆಚ್ಚಿನ ಸೀಟುಗಳನ್ನು ಕೊಡಲು ಪರಿಶೀಲನೆ ಮಾಡುವಂತೆ ನಾವು ಅವರನ್ನು ಕೇಳಿದ್ದೇವೆ. ಅವರಿಂದ ಅನುಮತಿ ದೊರಕಿದ ತಕ್ಷಣ ಇದನ್ನು ಮಾಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಖಾಸಗಿ ಕಾಲೇಜುಗಳವರು ಸ್ವಂತ ಕಟ್ಟಡ ಹೊಂದಿರುವವರಿಗೆ ಸೀಟುಗಳನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದ್ದಾರೆ. ಇದರ ಆರ್ಥ ಯಾರು ದೊಡ್ಡದಾಗಿ ಕಟ್ಟಡ ಗಳನ್ನು ಬೆಳೆಸಿಕೊಂಡಿದ್ದಾರೆ. ಅಂತಹ ಕಾಲೇಜುಗಳಿಗೆಲ್ಲ ಸೀಟುಗಳನ್ನು ಜಾಸ್ತಿ ಮಾಡುವುದು ಸರಿಯಾದ ನೀತಿಯೆ ? ಅಥವಾ ಬೇರೆ ಯಾವುದಾದರೂ ನೀತಿಯೆ ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಬಹುಶಃ ತಿಳಿದುಕೊಂಡಿರಬಹುದು ಮಣಿಪಾಲ್ ಕಾಲೇಜಿನವರು ಮತ್ತು ಸೈಂಟ್‌ಜಾನ್ ಮೆಡಿಕಲ್ ಕಾಲೇಜಿನವರಿಗೆ ವಿದ್ಯಾರ್ಥಿಗಳನ್ನು ಕಳುಹಿಸುವುದು ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಪರಿಸ್ಥಿತಿ. ಅವರೇ ಆದ ಆಸ್ಪತ್ರೆಯನ್ನು ಕಟ್ಟಿಕೊಂಡರೆ ಮೆಡಿಕಲ್ ಕೌನ್ಸಿಲ್‌ನವರು ಸೀಟುಗಳನ್ನು ಕೊಡುವುದಕ್ಕೆ ಒಪ್ಪಿಕೊಂಡರೆ ಅವರಿಗೆ ಎಷ್ಟು ಕಡಿಮೆ ಸೀಟುಗಳನ್ನು ಕೊಡಬೇಕೋ ಅಷ್ಟು ಸೀಟುಗಳನ್ನು ಕೊಡುತ್ತಿದ್ದೇವೆ. ಈಗಾಗಲೇ ಮಣಿಪಾಲ್ ಮೆಡಿಕಲ್ ಕಾಲೇಜಿನವರಿಗೆ ೧೦೨ ಸೀಟುಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ನಮಗೆ ಒಂದು ಸೀಟು ಸಹ ಬರುವುದಿಲ್ಲ. ಸೆಂಟ್‌ಜಾನ್ ಮೆಡಿಕಲ್ ಕಾಲೇಜಿಗೆ ೬೨ ಸೀಟುಗಳನ್ನು ಕೊಡಲಾಗಿದೆ ಅದರಲ್ಲಿ ನಮಗೆ ಒಂದು ಸೀಟು ಸಹ ಬರುವುದಿಲ್ಲ. ಇದನ್ನು ಕೇಂದ್ರ ಸರ್ಕಾರ ಒಪ್ಪಿದೆ, ಹಿಂದಿನ ಸರ್ಕಾರದಿಂದ ಬಂದಿರತಕ್ಕ ನೀತಿ ಇದು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಾಜೂಗೌಡರವರೇ ತಮ್ಮ ಪ್ರಶ್ನೆ ಮುಂದೆ ಹೋಗಿದೆ. ಶ್ರೀ ಬಿ. ಎ. ಉಪ್ಪಿನ್ ಮಾನ್ಯ ಸದಸ್ಯರು ಇಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳು

೧೮೩೭ ಶ್ರೀ ನಾರಾಯಣ ಸ್ವಾಮಿ (ಬಾಗೇಪಲ್ಲಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ , ಕೇಂದ್ರಗಳ ಸಂಖ್ಯೆ ಎಷ್ಟು ? ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ?

ಆ) ಬಾಗೇಪಲ್ಲಿ ಸಾರ್ವತ್ರಿಕ ಆಸ್ಪತ್ರೆಯಲ್ಲಿ ದಂತ ವೈದ್ಯರನ್ನು ನೇಮಿಸುವುದರಲ್ಲಿ ೩ ವರ್ಷಗಳು ಕಳೆದರೂ ನೇಮಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೨ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೭ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಒಂದು ಸಹಾಯಕ ಆರೋಗ್ಯ ಕೇಂದ್ರ ಸಧ್ಯಕ್ಕೆ ನಡೆಯುತ್ತಿದೆ. ಈ ಆಸ್ಪತ್ರೆಗಳಲ್ಲಿ ಒಳ ಹುದ್ದೆಗಳು ಖಾಲಿ ಇವೆ.

ಆ) ಬಂದಿದೆ.

ಇ) ಕರ್ನಾಟಕ ಲೋಕಸೇವಾ ಆಯೋಗವನ್ನು ಅಭ್ಯರ್ಥಿಗಳ ಆಯ್ಕೆ ಮಾಡಲು ಕೋರಿದ್ದು ಅವರು ಲಭ್ಯವಾದೊಡನೆ ಈ ಹುದ್ದೆಗಳನ್ನು ತುಂಬಲಾಗುವುದು.